**<u>ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಲಯ, ಸಿರುಗುಪ್ಪ</u>**

**<u>ಸಿ.ಸಿ. ನಂ.284/2020</u>**

**<u>ಸಿ.ಡಬ್ಲ್ಯೂ:2 ಪಿ.ಡಬ್ಲ್ಯೂ:2</u>**

| | | |
|---|---|---|
| ಸಾಕ್ಷಿದಾರನ ಹೆಸರು | : | ಬಸವರಾಜ |
| ತಂದೆಯ ಹೆಸರು | : | ಗುರುಪಾದಯ್ಯ |
| ವಯಸ್ಸು | : | 43 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ಹಚ್ಚೊಳ್ಳಿ |

**<u>ಸಾಕ್ಷಿಗೆ ದಿನಾಂಕ:21.11.2023 ರಂದು ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ</u>**

1. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಮೂರು ವರ್ಷಗಳ ಹಿಂದೆ ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ . ನಿ.ಪಿ.1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮ 1 ರಿಂದ 3 ರ ಮೇಲೆ ಅಂಟಿಸಿದ ಚೀಟಿಯಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಮು.ಮ 1(ಬಿ) ಯಿಂದ 3(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯ ನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

**ಸಿ.ಡಬ್ಲ್ಯೂಃ 2  ಪಿ.ಡಬ್ಲ್ಯೂಃ 2**

ದಿಃ 26.03.2020 ರಂದು  ಬೀರಳ್ಳಿ ಗ್ರಾಮದ ರಾವಿಹಾಳ್ ರಸ್ತೆಯಲ್ಲಿನ ಸಾರ್ವಜನಿಕ ಸ್ಥಳದಲ್ಲಿ ಪೋಲೀಸರು ನನ್ನ ಸಮಕ್ಷಮ ದಾಳಿ ನಡೆಸಿದಾಗ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿ ಹೋಗಿದ್ದು ಸ್ಥಳ ಪರೀಶೀಲನೆ ಮಾಡಿದಾಗ ಮೂರು ರಟ್ಟಿನ ಬಾಕ್ಸ್ ಗಳಲ್ಲಿ ಮಧ್ಯವು ಕಂಡು ಬಂದಿದ್ದು ಒಂದು ಬಾಕ್ಸ್ನಲ್ಲಿ 180 ಎಂ.ಎಲ್ ನ ಎಂ.ಸಿ ವಿಸ್ಕಿ 48 ಬಾಟಲಿಗಳು ಇದ್ದು ಒಂದು ಬಾಟಲಿಯ ಬೆಲೆ 162.22 ರೂ.  ಒಟ್ಟು ಬೆಲೆ 7,786.56-00 ಇದ್ದು ಇನ್ನೊಂದು ಬಾಕ್ಸಿನಲ್ಲಿ  90 ಎಂ.ಎಲ್ ನ 8 ಪಿ.ಎಂ ವಿಸ್ಕಿ 12 ಟೆಟ್ರಾ ಪೌಚ್ ಇದ್ದು ಒಂದು ಬಾಟಲಿಯ ಬೆಲೆ 45.10 ರೂ.  ಒಟ್ಟು ಬೆಲೆ 541.02-00 ಇದ್ದು , ಇನ್ನೊಂದು ರಟ್ಟಿನ ಬಾಕ್ಸಿನಲ್ಲಿ 90 ಎಂ.ಎಲ್ ನ ಫ್ರೆಂಡ್ಸ್ ಕ್ಲಬ್  ವಿಸ್ಕಿ 48 ಟೆಟ್ರಾ ಪೌಚ್  ಇದ್ದು ಒಂದು ಬೆಲೆ 30.32 ರೂ.  ಒಟ್ಟು ಬೆಲೆ 1,455.36-00 ಇದ್ದವು ಎಂದರೆ ಸರಿಯಲ್ಲ.  ಅವುಗಳನ್ನು ಪರಿಶೀಲನೆ ಮಾಡಿ ಇದರಲ್ಲಿ ಇದ್ದ ತಲಾ ಎರಡರಂತೆ ಬಿಳಿ ಚೀಲದಲ್ಲಿ ಹಾಕಿ ಬಾಯಿಯನ್ನು ಕಟ್ಟಿ  ಅರಗಿನಿಂದ ಸೀಲಾಕಿ ಪಂಚರು ಮತ್ತು ನನ್ನ ಸಹಿ ಇದ್ದ ಚೀಟಿಯನ್ನು ಅಂಟಿಸಿ ಸ್ಥಳದಲ್ಲಿ  ಬೆ.11.00 ರಿಂದ 11.30 ಗಂಟೆ ವರೆಗೆ ಪಂಚನಾಮೆಯನ್ನು   ಬರೆದು ಅದಕ್ಕೆ ನನ್ನ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**